ಹರಪನಹಳ್ಳಿ ಟೌನಿಗೆ ೫೦ ಹಾಸಿಗೆವುಳ್ಳ ಆಸ್ಪತ್ರೆಯ ಮಂಜೂರಾತಿ

೧೫೧ (೫೪೯) ಶ್ರೀ ಬಿ.ಹೆಚ್. ವೆಂಕನಾಯಕ (ಹರಪನಹಳ್ಳಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹರಪ್ಪನಹಳ್ಳಿ ನಗರಕ್ಕೆ ೫೦ ಹಾಸಿಗೆವುಳ್ಳ ಆಸ್ಪತ್ರೆಯನ್ನು ಮಂಜೂರು ಮಾಡುವುದಾಗಿ ಭರವಸೆ ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಭರವಸೆಯನ್ನು ತ್ವರಿತವಾಗಿ ಕಾರ್ಯಗತಗೊಳಿಸಲಾಗುವುದೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೇ ಹರಪನಹಳ್ಳಿ ನಗರಕ್ಕೆ ೫೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಮಂಜೂರು ಮಾಡುವುದಾಗಿ ಭರವಸೆ ಕೊಟ್ಟಿರುವುದು ನಿಜವೆ ?

ಅಧ್ಯಕ್ಷರು.—ಆ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರವಲ್ಲಿ ಹೇಳಿದ ಮೇಲೆ ತಾವು ಪ್ರಶ್ನೆ ಏನು ಕೇಳುತ್ತೀರಿ (ಪ್ರಶ್ನೋತ್ತರ ವೇಳೆ ಮುಗಿಯಿತು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಕೇಂದ್ರ ಸರ್ಕಾರ ರಾಜ್ಯಕ್ಕೆ ಸರಬರಾಜು ಮಾಡಿದ ಆಹಾರ ಪದಾರ್ಥಗಳ ಪ್ರಮಾಣ

೬೪ (೫೬) ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಕಳೆದ ೧೦ ತಿಂಗಳಲ್ಲಿ ಯಾವ ಯಾವ ಆಹಾರ ಪದಾರ್ಥಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಿದೆ ?

ಆ) ಸರ್ಕಾರದವರ ಬೇಡಿಕೆ ಎಷ್ಟು ?

ಇ) ಕೇಂದ್ರ ಸರ್ಕಾರದವರು ಕೊಟ್ಟ ದಾಸ್ತಾನು ಪೂರ್ತಾ ಕರ್ನಾಟಕಕ್ಕೆ ತರಲಾಯಿತೆ ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಅಕ್ಕಿ ೧,೬೦,೦೦೦ ಟನ್. ಗೋಧಿ ೧,೨೦,೦೦೦ ಟನ್, ಸಕ್ಕರೆ ೧,೬೩,೪೫೨ ಟನ್

ಆ) ಅಕ್ಕಿ ೪೦,೦೦೦ ಟನ್ (ತಿಂಗಳಿಗೆ) ಗೋಧಿ ೧೫,೦೦೦ ಟನ್ (ತಿಂಗಳಿಗೆ)
(ಸಾರ್ವಜನಿಕರ ವಿತರಣೆ)

ಸಕ್ಕರೆ ೨೫,೦೦೦ ಟನ್ (ತಿಂಗಳಿಗೆ) ಗೋಧಿ ೪೦,೦೦೦ ಟನ್ (ತಿಂಗಳಿಗೆ)
(ಹಿಟ್ಟಿನ ಗಿರಣಿಗಳಿಗೆ)

ಇ) ಹೌದು (ಗೋಧಿಯನ್ನು ಬಿಟ್ಟು)

ಶಿವಮೊಗ್ಗದಲ್ಲಿ ಗ್ಲೂಕೋಸ್ ದ್ರಾವಣ ಘಟಕದ ಸ್ಥಾಪನೆ

೬೫ (೨೫೩) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಆಗತ್ಯ ಸರಬರಾಜು ಮಾಡುವ ಉದ್ದೇಶ್ಯ (ಐವಿಪ್ಲ್ಯುಯಿಡ್) ಇಂಜೆಕ್ಷನಿಗೆ ಉಪಯೋಗಿಸುವ ಗ್ಲೂಕೋಸ್ ದ್ರಾವಣ ತಯಾರಿಕೆ ಆಗತ್ಯ ಯಂತ್ರೋಪ್ಕರಣಗಳನ್ನು ಒದಗಿಸಲಾಗಿದೆಯೇ ?